


## ಶಾಂತಿಗಾಗಿ ಪ್ರಾರ್ಥನೆ

ಯುದ್ಧ ನನ್ನನ್ನು ವರ್ಷವಿಡೀ ಬಾಧಿಸಿದೆ. ಕಾರಣ ಏನೇ ಇರಲಿ, ಯಾವುದೇ ಕಾರಣಕ್ಕೂ ಜಗತ್ತಿನ ಯಾವ ಮೂಲೆಯಲ್ಲೂ ಯುದ್ಧ ಆಗಬಾರದು. ಆದರೆ ಅವು ಆಗ್ತಾನೇ ಇವೆ. ಉಕ್ರೇನ್ ಮತ್ತು ರಷ್ಯಾ ನಡುವಿನ ಕದನ ಇರಬಹುದು ಅಥವಾ ಇಸ್ರೇಲ್ ಮತ್ತು ಪಾಲಿಸ್ತೀನ್‌ನ ಹಮಾಸ್ ಉಗ್ರರ ನಡುವಿನ ಸಂಘರ್ಷ ಇರಬಹುದು. ಇಲ್ಲಿ ಪರ ವಿರೋಧದ ಪ್ರಶ್ನೆ ಬರಲೇಬಾರದು.

ಮಣಿಪುರದಲ್ಲಿ ನಡೆದ ಜನಾಂಗೀಯ ಹಿಂಸಾಚಾರ ನನ್ನನ್ನು ತುಂಬ ವಿಚಲಿತಳನ್ನಾಗಿ ಮಾಡಿತ್ತು. ಮನುಷ್ಯ ನೆಲೆಸಿರುವ ಎಲ್ಲೂ ಜಾತಿ ಧರ್ಮದ ಹೆಸರಲ್ಲಿ ಸಂಘರ್ಷಗಳು ಆಗಬಾರದು. ಆದರೆ ಅದು ನಿರಂತರ ಆಗುತ್ತಿರುವುದು ಎಲ್ಲೋ ಒಂದು ಹಂತದಲ್ಲಿ ನಮ್ಮನ್ನು ಖಿನ್ನತೆಗೆ ತಳ್ಳುತ್ತದೆ. ಜನರ ನಡುವಿನ ಜಗಳ ಕಾಡುತ್ತವೆ. ಯುದ್ಧ ನಿಲ್ಲಬೇಕು ಎಂದು ನಿತ್ಯವೂ ಪ್ರಾರ್ಥನೆ ಮಾಡುವಂತೆ ಆಗಿದೆ. ಮುಂದಿನ ದಿನಗಳಲ್ಲಿ ಯುದ್ಧ ನಿಂತಿದ್ರೇ ಆದರೆ ವಿಶ್ವದ ಮಾನವಕುಲಕ್ಕೆ ನೆಮ್ಮದಿ ಸಾಧ್ಯ ಆಗುತ್ತದೆ. ಹೊಡೆದಾಟಗಳು ಹೀಗೇ ಮುಂದುವರೆದರೆ ಹಿಂಸಾಚಾರ ಕಣ್ಣೆದುರು ಬಂದು ನಿಲ್ಲುತ್ತವೆ. ಆ ನೋವಿನ ದೃಶ್ಯವನ್ನು ತಡೆಯಲು ಸಾಧ್ಯ ಆಗುವುದಿಲ್ಲ.

**-ದಿಶಾ ರಮೇಶ್**
ರಂಗಭೂಮಿ ಕಲಾವಿದೆ




## ಕದನದ ಕಬಂಧಬಾಹುಗಳು

ರಷ್ಯಾ–ಉಕ್ರೇನ್; ಇಸ್ರೇಲ್–ಹಮಾಸ್ – ಹೀಗೆ, ದೇಶ ದೇಶಗಳ ನಡುವೆ ನಡೆಯುತ್ತಿರುವ ಯುದ್ಧಗಳು ಅತ್ಯಂತ ವಿನಾಶಕಾರಿ. ಈ ಕದನಗಳ ಪರಿಣಾಮ ಇಡೀ ಪ್ರಪಂಚಕ್ಕೇ ತಟ್ಟುತ್ತಿದೆ. ಈ ಯುದ್ಧಗಳನ್ನು ನೋಡುತ್ತಿದ್ದರೆ, ಇಡೀ ಪ್ರಪಂಚ ಅದೆಷ್ಟು ದ್ವೇಷದಿಂದ ತುಂಬಿಹೋಗಿದೆ ಎಂಬ ಭೀತಿ ಹುಟ್ಟುತ್ತದೆ. ಮಾನವೀಯ ಮೌಲ್ಯಗಳು ಕಳೆದುಹೋಗುತ್ತಿವೆಯೇ ಎಂಬ ಆತಂಕವಾಗುತ್ತದೆ.

ನಾವ್ಯಾರೂ ನಮ್ಮ ಮುಂದಿನ ಪೀಳಿಗೆಯ ಬಗ್ಗೆ ಯೋಚನೆಯೇ ಮಾಡುತ್ತಿಲ್ಲ ಎಂಬುದನ್ನು ಯುದ್ಧಗಳೇ ಸಾರಿ ಹೇಳುವಂತಿವೆ. ಸರ್ಕಾರಗಳು, ವಿಶ್ವಮಟ್ಟದ ಸಂಸ್ಥೆಗಳು ಸದ್ಯದ ಮಟ್ಟಿಗಿನ ಲಾಭ ನೋಡುತ್ತಿವೆ. ಮುಂದಿನವರಿಗಾಗಿ ನಾವು ಏನನ್ನು ಬಿಟ್ಟು–ಕೊಟ್ಟು ಹೋಗುತ್ತಿದ್ದೇವೆ ಎಂಬುದರ ಕುರಿತು ಯಾರಿಗೂ ಯೋಚಿಸಲು ವ್ಯವಧಾನ ಇಲ್ಲದಾಗಿದೆ. ಎಳೆಯರೆದೆಯಲ್ಲಿ ಅಭದ್ರತೆ, ದ್ವೇಷ ತುಂಬುತ್ತಿದ್ದೇವೇನೋ ಅನ್ನಿಸುತ್ತಿದೆ. ಒಗ್ಗೂಡುವ ಬದಲು ವಿಭಜನೆ ಮಾಡಲು ಎಲ್ಲರೂ ಪಣ ತೊಟ್ಟು ನಿಂತಿರುವಂತೆ ಕಾಣುತ್ತದೆ. ಈ ಎಲ್ಲಾ ನಕಾರಾತ್ಮಕತೆ ತೊಡೆದು, ಯುದ್ಧದಲ್ಲಿ ನಲುಗುತ್ತಿರುವ ಎಳೆಯ ಜೀವಗಳನ್ನು ಕಂಡರೆ ಸ್ವಲ್ಪವಾದರೂ ಕರುಣೆ ಹುಟ್ಟುವಂಥ ಮನೋಭಾವ ಎಲ್ಲರದ್ದಾಗಲಿ ಎಂಬ ಪ್ರಾರ್ಥನೆಯೊಂದೇ ಉಳಿದಿರುವುದು.

**-ಅಶ್ವಿನಿ ನಾಚಪ್ಪ**
ಅಂತರರಾಷ್ಟ್ರೀಯ ಮಾಜಿ ಅಥ್ಲೀಟ್

ನತದೃಷ್ಟ ಮಕ್ಕಳಲ್ಲಿ ಹಸುಗೂಸುಗಳು ಹಾಗೂ ಅಂಬೆಗಾಲಿನ ಕಂದಮ್ಮಗಳೂ ಸೇರಿವೆ. ವಾಯು ಹಾಗೂ ಕ್ಷಿಪಣಿ ದಾಳಿಯಿಂದಾಗಿ ಕುಸಿದುಬಿದ್ದ ಕಟ್ಟಡಗಳಡಿ ಹೆಚ್ಚಿನ ಮಕ್ಕಳು ಸಾವಿಗೀಡಾಗಿದ್ದಾರೆ.. ಗಾಜಾ ಪಟ್ಟಿಯು ಮಕ್ಕಳ ಪಾಲಿಗೆ ಸ್ಮಶಾನವಾಗಿದೆ, ಪೋಷಕರ ಪಾಲಿನ ಶಾಪವಾಗಿದೆ ಎನ್ನುವ ಅಭಿಪ್ರಾಯಗಳು ವ್ಯಕ್ತವಾಗಿವೆ. ಇಸ್ರೇಲ್ ಮತ್ತು ಹಮಾಸ್ ನಡುವಣ ಯುದ್ಧ ಮಾತ್ರವಲ್ಲ, ವಿಶ್ವದ ಹಲವು ಭಾಗಗಳಲ್ಲಿ ನಿತ್ಯ ನಡೆಯುತ್ತಿರುವ ಸಂಘರ್ಷಗಳು ಕನಸುಕಂಗಳ ಕಂದಮ್ಮಗಳನ್ನು ಬಲಿಪಡೆಯುತ್ತಿವೆ. 2013ರಿಂದ 2017ರ ಅವಧಿಯಲ್ಲಿ, ವಿಶ್ವದ 10 ಸಂಘರ್ಷ ವಲಯಗಳಲ್ಲಿ ಕನಿಷ್ಠ 5.5 ಲಕ್ಷ ಶಿಶುಗಳು ಸಾವನ್ನಪ್ಪಿವೆ ಎಂದು 'ಸೇವ್ ದಿ ಚಿಲ್ಡ್ರನ್' ಸಂಸ್ಥೆ ಅಂದಾಜು ಮಾಡಿದೆ. ಐದು ವರ್ಷದೊಳಗಿನ ಮಕ್ಕಳನ್ನೂ ಸೇರಿಸಿಕೊಂಡರೆ ಸಾವಿಗೀಡಾದ ಎಳೆಯರ ಸಂಖ್ಯೆ 8.7 ಲಕ್ಷಕ್ಕೂ ಹೆಚ್ಚಾಗಿದೆ. ಯುನಿಸೆಫ್ ಅಂದಾಜಿನ ಪ್ರಕಾರ, 2005ರಿಂದ 2022ರ ಅವಧಿಯಲ್ಲಿ 1 ಲಕ್ಷಕ್ಕೂ ಹೆಚ್ಚು ಮಕ್ಕಳನ್ನು ಸಶಸ್ತ್ರ ಪಡೆಗಳು ಅಥವಾ ಉಗ್ರರ ಗುಂಪುಗಳು ತಮ್ಮ ದುಷ್ಕೃತ್ಯಗಳಿಗೆ ಬಳಸಿಕೊಂಡಿವೆ; ಮಕ್ಕಳ ಹಕ್ಕುಗಳ ಗಂಭೀರ ಉಲ್ಲಂಘನೆ ಪ್ರತಿದಿನವೂ ನಡೆಯುತ್ತಿದೆ.

